ಸೇತುವೆ, ಸಾಮಾಜಿಕ, ಅರಣ್ಯೀಕರಣ ಹಾಗೂ ಭೂ ಅಂತರ್ಜಲ ವಲಯದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಅನುಬಂಧ–1

ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಾರು ಖರ್ಚು ಮಾಡಿದ ಹಣದ ವಿವರ

(ರೂ. ಲಕ್ಷಗಳಲ್ಲಿ)

ಜಿಲ್ಲೆಗಳು	2007–08	2008–09	2009–10
ಗುಲಬರ್ಗ	1302.17	1290.92	1171.50
ಬೀದರ	555.24	790.92	669.46
ರಾಯಚೂರು	586.21	550.28	431.27
ಕೊಪ್ಪಳ	512.62	317.39	613.34
ಬಳ್ಳಾರಿ	545.22	424.87	430.05
ದಾವಣಗೆರೆ	181.00	94.00	106.00
ಒಟ್ಟು	**3682.45**	**3468.38**	**3841.698**

ಅನುಬಂಧ–2

2010–11ನೇ ಸಾಲಿನ ಕ್ರಿಯಾ ಯೋಜನೆಯ ಸಾರಾಂಶ

(ರೂ.ಲಕ್ಷಗಳಲ್ಲಿ)

1	ಮುಂದುವರೆದ ಕಾಮಗಾರಿಗಳಿಗಾಗಿ	366.88
2	ಹೊಸ ಕಾಮಗಾರಿಗಳಿಗಾಗಿ	
	ಸಾಮಾನ್ಯ ಕಾಮಗಾರಿಗಳು	1079.63
	ಎಸ್.ಸಿ.ಪಿ. ಕಾಮಗಾರಿಗಳು	400.00
	ಟಿ.ಎಸ್.ಪಿ. ಕಾಮಗಾರಿಗಳು	170.00
3	ಸರ್ಕಾರದ ವಿವೇಚನಾ ನಿಧಿ	108.50
4	ಅಧ್ಯಕ್ಷರ ವಿವೇಚನಾ ನಿಧಿ	45.00
6	ಆಡಳಿತ ವೆಚ್ಚಕ್ಕಾಗಿ	130.00
	ಒಟ್ಟು	**2300.00**

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ

10(49) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:[ಭಾಲ್ಕಿ] ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನಲ್ಲಿ ಮುಕ್ತಾಯಗೊಂಡ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಇಲಾಖೆಯ ವತಿಯಿಂದ ಯಾವ ಯಾವ ಬಾಬ್ತಿನಲ್ಲಿ ಎಷ್ಟು ಹಣವನ್ನು ಯಾವ ಯಾವ ಕಾರಣಗಳಿಗಾಗಿ ವೆಚ್ಚ ಮಾಡಲಾಗಿದೆ [ಪೂರ್ಣ ವಿವರಗಳನ್ನು ಒದಗಿಸುವುದು]

ಆ) ಈ ಸಮಾವೇಶದಿಂದ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಯಾವ ರೀತಿಯ ಅನುಕೂಲವಾಗಿದೆ?

ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇತ್ತೀಚೆಗೆ ಬೆಂಗಳೂರಿನಲ್ಲಿ ಮುಕ್ತಾಯಗೊಂಡ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಇಲಾಖೆಯ ವತಿಯಿಂದ ಇಂದಿನವರೆಗೆ 2852-80-800-0-46 ಬಾಬ್ತಿನಲ್ಲಿ ಸಮಾವೇಶ ನಡೆಸಲು ರೂ.12.045 ಕೋಟಿಗಳನ್ನು ಪಡೆಯಲಾಗಿದೆ. ಇದರಲ್ಲಿ ರೂ.12.00 ಕೋಟಿಗಳನ್ನು ಮುಂಗಡವಾಗಿ ಸಮಾವೇಶ ಹಾಗೂ ಸಮಾವೇಶದ ಪ್ರಚಾರ ಕಾರ್ಯಗಳಿಗೆ ಎಂ.ಸಿ. ಅಂಡ್ ಎ ರವರಿಗೆ ನೀಡಲಾಗಿದೆ. ಸಮಾವೇಶಕ್ಕೆ ಒಟ್ಟು ಸುಮಾರು ರೂ.29.2 ಕೋಟಿಗಳು ಖರ್ಚಾಗುತ್ತಿದ್ದು, ಬಿಲ್ಲುಗಳ ಪಾವತಿ ಮಾಡುವಾಗ ತೆರಿಗೆಗಳು ಸಹ ಸೇರುತ್ತದೆ. ಬಿಲ್ಲುಗಳ ಪಾವತಿ ಹಾಗೂ ಲೆಕ್ಕ ಹೊಂದಾಣಿಕೆಯ ನಂತರ ಖರ್ಚಿನ ವಿವರಗಳು ನಿಖರವಾಗುವುವು.

ಆ) ಈ ಸಮಾವೇಶದಲ್ಲಿ ರೂ.3.93 ಲಕ್ಷ ಕೋಟಿಗಳು ಬಂಡವಾಳವನ್ನು ಒಳಗೊಂಡ 389 ಯೋಜನೆಗಳಿಗೆ ಒಡಂಬಡಿಕೆ ಮಾಡಲಾಗಿದೆ. ಸದರಿ ಯೋಜನೆಗಳಿಂದ 7.10 ಲಕ್ಷ ಜನರಿಗೆ ನೇರ ಉದ್ಯೋಗಾವಕಾಶಗಳಿದ್ದು, ಪರೋಕ್ಷವಾಗಿ, ಜೀವನ ಮಟ್ಟ ಹೆಚ್ಚಿಸುವುದು, ಶಿಕ್ಷಣದಲ್ಲಿ ಸುಧಾರಣೆ ಮತ್ತು ರಾಜ್ಯದ ಕೈಗಾರಿಕಾ ವಲಯದ ಚಿತ್ರಣವನ್ನೇ ಬದಲಿಸುವ ಸಾಧ್ಯತೆ ಇರುತ್ತದೆ.

ವಿಶ್ವಬಂಡವಾಳ ಹೂಡಿಕೆದಾರರ ಸಮಾವೇಶ